UASB
LIBRARY
Newspaper Clippings
Pg .1 Wednesday 16-06-2021 Jai Kisan




**ಕೊಪ್ಪಳ ಜಿಲ್ಲೆಯ ತಳಕಲ್ಲ ಗ್ರಾಮದಲ್ಲಿ ಈರುಳ್ಳಿ ಶೇಖರಣಾ ಘಟಕ ನಿರ್ಮಿಸಿಕೊಂಡು ಬೆಲೆ ಕುಸಿತದ ನಷ್ಟವನ್ನು ತೂಗಿಸಿದ ಕೃಷಿಕ ತಿಮ್ಮಣ್ಣ ಚವಡಿ ಅವರು ಇತರ ರೈತರಿಗೆ ಮಾದರಿಯಾಗಿದ್ದಾರೆ.**

# ರೈತರಿಗೆ ಶೇಖರಣಾ ಘಟಕದ ರಕ್ಷೆ

## ಈರುಳ್ಳಿ ಮೌಲ್ಯವರ್ಧನೆಗೆ ಸಹಕಾರಿ

■ ಬಸವರಾಜ ಬಿನ್ನಾಳ

ಈರುಳ್ಳಿ ಬೆಳೆದ ರೈತರು ಬಹಳಷ್ಟು ಸಾರಿ ಬೆಲೆ ಕುಸಿತದಿಂದ ಸಂಕಷ್ಟಕ್ಕೀಡಾಗಿದ್ದಾರೆ. ಆದರೆ ಇಲ್ಲೊಬ್ಬ ರೈತ ವಿಭಿನ್ನವಾದ ರೀತಿಯಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತಳಕಲ್ಲ ಗ್ರಾಮದ ಪ್ರಗತಿಪರ ರೈತ ತಿಮ್ಮಣ್ಣ ಚವಡಿ ಅವರು ಈರುಳ್ಳಿ ಶೇಖರಣಾ ಘಟಕ ನಿರ್ಮಿಸಿಕೊಂಡು ಬೆಲೆ ಕುಸಿತದ ಸಂಕಷ್ಟದಿಂದ ಪಾರಾಗಿದ್ದಾರೆ.

ರೈತ ತಿಮ್ಮಣ್ಣ ಚವಡಿ 2018-19ರಲ್ಲಿ ಹನಿ ನೀರಾವರಿ ಆಳವಡಿಸಿ ಬಾಳೆ ಬೆಳೆದು ಅದರಲ್ಲೂ ಸೈ ಎನಿಸಿಕೊಂಡರು. ಈರುಳ್ಳಿ, ಬದನೆ, ಒಣ ಮೆಣಸಿನಕಾಯಿ, ಸಿಹಿ ಗುಂಬಳ, ಸಾಂಬಾರಸೌತೆ ಸೇರಿ ಹತ್ತಾರು ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಎಲ್ಲದಕ್ಕೂ ಹನಿ ನೀರಾವರಿ ಮೂಲಕ ನೀರುಣಿಸುತ್ತಾರೆ. ತೋಟಗಾರಿಕಾ ಇಲಾಖೆಯ ತಜ್ಞರ ಸಲಹೆಯಂತೆ ಜೈವಿಕ ಗೊಬ್ಬರ ಮತ್ತು ಅಗತ್ಯವಿದ್ದಾಗ ಕೀಟನಾಶಕಗಳ ಬಳಕೆ ಮಾಡುತ್ತಾರೆ. ಕೊಟ್ಟಿಗೆ ಗೊಬ್ಬರ ಯಥೇಚ್ಛವಾಗಿ ಬಳಸುವುದೇ ಉತ್ತಮ ಹಾಗೂ ಗುಣಮಟ್ಟದ ಇಳುವರಿಗೆ ನಾಂದಿ ಎನ್ನುತ್ತಾರೆ.



### ಘಟಕ ನಿರ್ಮಾಣ

2018-19 ಸಾಲಿನಲ್ಲಿ 2 ಎಕರೆ ಜಮೀನಿನಲ್ಲಿ ಈರುಳ್ಳಿ ಬೆಳೆದಿದ್ದರು. 2 ಎಕರೆಯಿಂದ 8-10 ಟನ್‌ಗಳಿಗೂ ಮೇಲಟ್ಟ ಉತ್ತಮ ಇಳುವರಿ ಪಡೆದರು. ಆದರೆ ಮಾರುಕಟ್ಟೆಯಲ್ಲಿ ಉತ್ತಮ ದರ ಇರಲಿಲ್ಲ. ಆಗ ಹೋಬಳಿ ಅಧಿಕಾರಿ ಚಂದ್ರಶೇಖರ ಅವರು ಮಾರ್ಗದರ್ಶನ ಮಾಡಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ "ಈರುಳ್ಳಿ ಶೇಖರಣಾ ಘಟಕ" ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು.

ಆಗ ರೈತ ತಿಮ್ಮಣ್ಣ ಇಲಾಖೆಯ ನಿಯಮದಂತೆ ಈರುಳ್ಳಿ ಶೇಖರಣಾ ಘಟಕ ನಿರ್ಮಿಸಿಕೊಂಡಿದ್ದಾರೆ. ಈರುಳ್ಳಿ ಶೇಖರಣಾ ಘಟಕ ನಿರ್ಮಿಸಿಕೊಂಡ ವರ್ಷದಲ್ಲಿ ನಾನು 10 ರಿಂದ 12 ಟನ್‌ಗಳಷ್ಟು ಈರುಳ್ಳಿಯನ್ನು 4 ತಿಂಗಳ ಕಾಲ ಶೇಖರಣೆ ಮಾಡಿದೆ. ನಂತರ ಪ್ರತಿ ಕ್ವಿಂಟಲ್‌ಗೆ ಸರಾಸರಿ 1500 ರೂನಂತೆ ಮಾರಾಟ ಮಾಡಿದೆ. ನಂತರ ಸಿಹಿಗುಂಬಳ ಕೂಡಾ ಶೇಖರಣೆ ಮಾಡಲು ನನಗೆ ಅನುಕೂಲ ಆಯ್ತು. ಈಗ ಒಣ ಮೆಣಸಿನಕಾಯಿಗೆ ಬೇಡಿಕೆ ಇದೆ. ಒಂದು ಘಟಕದಿಂದಾಗಿ ನನಗೆ ಅನೇಕ ತರಕಾರಿಗಳನ್ನು ಕೀಪಿರಿಸಿ, ಮೌಲ್ಯವರ್ಧನೆ ಮಾಡಲು ಸಾಧ್ಯವಾಯಿತು. ಈರುಳ್ಳಿ ಶೇಖರಣ ಘಟಕ ಒಂದು "ಬಹು ಉಪಯೋಗಿ ಘಟಕ" ಎನ್ನುತ್ತಾರೆ ರೈತ ತಿಮ್ಮಣ್ಣ. ತಿಮ್ಮಣ್ಣ ಅವರ ಸಲಹೆ ಮೇರೆಗೆ ಯಲಬುರ್ಗಾ ತಾಲ್ಲೂಕಿನಲ್ಲಿ ರೈತರು 100ಕ್ಕೂ ಹೆಚ್ಚು ಇಂತಹ ಘಟಕಗಳನ್ನು ನಿರ್ಮಿಸಿಕೊಂಡಿದ್ದಾರೆ.

■ ತಳಕಲ್ಲ ರೈತನ ಪ್ರಯೋಗ

■ ಬಹುಪಯೋಗಿ ಘಟಕ

■ ತರಕಾರಿ ಬೆಳೆಯುವವರಿಗೂ ಉಪಯುಕ್ತ

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಈರುಳ್ಳಿ ಶೇಖರಣಾ ಘಟಕ ನಿರ್ಮಿಸಿಕೊಳ್ಳಲು ಅವಕಾಶ ಇದೆ. ಇದರಿಂದಾಗಿ 2019-20 ಮತ್ತು 2020-21ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಾದ್ಯಂತ 500 ರೈತರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ನರೇಗಾ ಯೋಜನೆಯಡಿ ಈ ಘಟಕ ನಿರ್ಮಿಸಿಕೊಳ್ಳಲುಶೇ.50 ಅನುದಾನದಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಾ ತೋಟಗಾರಿಕೆ ಕಚೇರಿ, ಹಾರ್ಟಿಕ್ಲಿನಿಕ್ ವಿಷಯ ತಜ್ಞರನ್ನು, ಸಹಾಯಕ ತೋಟಗಾರಿಕೆ ಅಧಿಕಾರಿ (ರಾಷ್ಟ್ರೀಯ ತೋಟಗಾರಿಕೆ ಮಿಷನ್) - 9448794811 ಸಂಪರ್ಕಿಸಬಹುದಾಗಿದೆ.

16-06-2021
Sk Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

16-06-2021
Uv Pg 06

# ಬಿತ್ತನೆ ಬೀಜ ಕೊರತೆ: ದರ ದುಪ್ಪಟ್ಟು, ರೈತರಿಗೆ ಇಕ್ಕಟ್ಟು

• ಅಮರೇಗೌಡ ಗೋನವಾರ

**ಹುಬ್ಬಳ್ಳಿ:** ದುಪ್ಪಟ್ಟು ದರದ ಜತೆಯಲ್ಲಿಯೇ ಬಿತ್ತನೆ ಬೀಜಗಳ ಕೊರತೆ ರೈತರನ್ನು ಹೈರಾಣಾಗಿಸುತ್ತಿದೆ. ಅನೇಕ ಜಿಲ್ಲೆಗಳಲ್ಲಿಮುಂಗಾರು ಮಳೆಶುರುವಾಗಿದ್ದು ರೈತರಿಗೆ ಬಿತ್ತನೆ ಬೀಜಗಳ ಕೊರತೆ ಎದುರಾಗಿದೆ. ಕೆಲವೇ ಬೆಳೆಗಳಿಗೆ ರೈತರು ಮುಗಿಬಿದ್ದಿರುವುದು, ರೈತರು ಬಿತ್ತನೆ ಬೀಜಗಳ ಸ್ವಾವಲಂಬನೆ ಕಳೆದುಕೊಂಡಿರುವುದು ಆವಾಂತರಸೃಷ್ಟಿಸತೊಡಗಿದೆ.

ಸರ್ಕಾರ ಬಿತ್ತನೆ ಬೀಜ, ರಸಗೊಬ್ಬರಕ್ಕೆ ಯಾವುದೇ ಕೊರತೆ ಇಲ್ಲ ಎಂದು ಹೇಳುತ್ತಿದೆಯಾದರೂ ವಾಸ್ತವಿಕವಾಗಿ ವಿವಿಧ ಜಿಲ್ಲೆಗಳಲ್ಲಿಬಿತ್ತನೆ ಬೀಜಗಳ ಕೊರತೆ ಎದ್ದು ಕಾಣುತ್ತಿದೆ. ಇದೇ ಕಂಪನಿಯ ಬೀಜ ಬೇಕೆಂಬ ರೈತರ ಬೇಡಿಕೆ ಸಹಜವಾಗಿಯೇ ಬೀಜಮಾರಾಟಗಾರರು ದರ ಹೆಚ್ಚುಮಾಡುವಂತೆ ಮಾಡಿದೆ. ಕೃತಕ ಅಭಾವ ಸೃಷ ್ಟಿಯೂ ಇಲ್ಲದಿಲ್ಲ.

ಮುಂಗಾರು ಹಂಗಾಮಿಗೆ ಸಾಮಾನ್ಯವಾಗಿ ಹೆಸರು, ಸೋಯಾಬೀನ್, ಮೆಣಸಿನಕಾಯಿ, ಉದ್ದು, ತೊಗರಿ, ಸಜ್ಜೆ ಹತ್ತಿ, ಸೂರ್ಯಕಾಂತಿ ಇನ್ನಿತರ ಬೆಳೆಗಳ ಬಿತ್ತನೆ ಮಾಡಲಾಗುತ್ತಿದೆ. ಉತ್ತರ ಕರ್ನಾಟಕದ ಧಾರವಾಡ, ಹಾವೇರಿ, ಬೆಳಗಾವಿ, ಗದಗ ಹಾಗೂ ಬೀದರ ಇನ್ನಿತರ ಜಿಲ್ಲೆಗಳಲ್ಲಿ ಈ ಬಾರಿ ಸೋಯಾಬೀನ್‌ಗೆ ಹೆಚ್ಚಿನ ಬೇಡಿಕೆಯಿದೆ. ಇದು ಬಟ್ಟರ್ ಹೆಸರು, ಉದ್ದು ಹತ್ತಿ ಬಿತ್ತನೆಗೆ ರೈತರು ಮುಂದಾಗುತ್ತಿದ್ದಾರೆ. ಬಳ್ಳಾರಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿಮೆಣಸಿನಕಾಯಿ ಪ್ರಮುಖ ಬೆಳೆಯಾಗಿ ಹೊರಹೊಮ್ಮಿದೆ. ಕಲಬುರಗಿ ಜಿಲ್ಲೆಯಲ್ಲಿತೊಗರಿಗೆ ಹೆಚ್ಚಿನ ಬೇಡಿಕೆಯಿದೆ. ಬಿತ್ತನೆ ಬೀಜದ ಆಭಾವ ಒಂದು ಕಡೆಯಾದರೆ, ರೈತರಿಗೆ ಸಬ್ಸಿಡಿ ದರದಲ್ಲಿ ನೀಡುವ ಬಿತ್ತನೆ ಬೀಜಗಳು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರ ಇರುವುದು ಬೀದರ ಜಿಲ್ಲೆಯಲ್ಲಿ ಸೋಯಾಬೀನ್ ಬೀಜದ ಕೊರತೆ

**ಇದೆ. ಜಂಟಿ ಕೃಷಿ ನಿರ್ದೇಶಕರು ಬೀಜದ ದಾಸ್ತಾನು ಇಲ್ಲ ಎನ್ನುತ್ತಿದ್ದಾರೆ. ಉತ್ತಮ ಬೆಲೆ ಬರುತ್ತದೆ ಎಂಬ ಕಾರಣಕ್ಕೆ ಶೇ.65 ಪ್ರದೇಶದಲ್ಲಿಸೋಯಾ ಬಿತ್ತನೆಗೆ ರೈತರು ಮುಂದಾಗಿದ್ದಾರೆ. ಸರ್ಕಾರ ಬೀಜದ ವ್ಯವಸ್ಥೆ ಮಾಡಲಿ.**

• ಸಿದ್ರಾಮಪ್ಪ ಆಣಗೋರೆ, ಜಿಲ್ಲಾಧ್ಯಕ್ಷ
ರೈತಸಂಘ, ಬೀದರ

ಬಳ್ಳಾರಿ ಜಿಲ್ಲೆಯಲ್ಲಿ ಭತ್ತ ಬೆಳೆಯುವ ಪ್ರದೇಶದಲ್ಲೂ ಈ ಬಾರಿ ಮೆಣಸಿನಕಾಯಿ ಬಿತ್ತನೆಗೆ ರೈತರು ಮುಂದಾಗಿದ್ದಾರೆ. ಸಿಹೆಂಟಾ ಕಂಪನಿ ಮೆಣಸಿನಕಾಯಿ ಬೀಜ ಬಿತ್ತನೆ ಮಾಡಿದರೆ ರೋಗ ಕಡಿಮೆ ಎಂಬ ಅನಿಸಿಕೆ ಇದೆ. ಆದರೆ, ಕಳೆದ ಒಂದೆರಡು ವರ್ಷಗಳ ಹಿಂದಿನಿಂದ ಇದೇ ಕಂಪನಿ ಮೆಣಸಿನಕಾಯಿ ಬೀಜ ಬಿತ್ತನೆ ಮಾಡಿದ ಕಡೆ ವೈರಸ್ ಕಾಣಿಸಿಕೊಂಡಿದ್ದೂ ಇದೆ.

• ಮಾಧವ ರೆಡ್ಡಿ, ರೈತ ಮುಖಂಡ, ಬಳ್ಳಾರಿ

ರೈತರ ಅಸಮಾಧಾನಕ್ಕೆ ಕಾರಣವಾಗಿದೆ.

**ಸೋಯಾ ದರ ದುಪ್ಪಟ್ಟು ಬರೆ:** ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಈ ಬಾರಿ ಸೋಯಾ ಬೀಜದ ದರ ಹಾಗೂ ಕೆಲವು ಕಡೆ ಲಭ್ಯತೆ ಕೊರತೆ ರೈತರ ಸಂಕಷ್ಟ ಹೆಚ್ಚಿಸಿದೆ. ಧಾರವಾಡ, ಹಾವೇರಿ, ಗದಗ, ಬೆಳಗಾವಿ ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿಗೆ ಸೋಯಾಬೀನ್ ಪ್ರಮುಖ ಬೆಳೆ. ಮಾರುಕಟ್ಟೆಯಲ್ಲಿ 73 ರೂ.ಗೆ ಒಂದು ಕೆಜಿ ಸೋಯಾ ಬಿತ್ತನೆ ಬೀಜ ದೊರೆತರೆ, ಸರ್ಕಾರ ಸೋಯಾ ಬಿತ್ತನೆ ಬೀಜ ಮಾರುಕಟ್ಟೆ ದರಕ್ಕಿಂತ ಸಬ್ಸಿಡಿಯಲ್ಲಿ ನೀಡುವ ದರ ಅಧಿಕವಾಗಿದ್ದು, ಇದರಿಂದ ಸಣ್ಣರೈತರಿಗೆ ತೊಂದರೆ ಆಗುತ್ತಿದೆ.

**ಹೆಸರು ಬಿತ್ತನೆ ಬೀಜವೂ ಮಾರುಕಟ್ಟೆಗಿಂತ ಸಬ್ಸಿಡಿ ದರ ಹೆಚ್ಚಿದೆ. ಸಬ್ಸಿಡಿ ಹೆಸರಲ್ಲಿ ರೈತರಿಗೆ ಅನ್ಯಾಯ ಮಾಡುವುದು ಬೇಡ.**

• ವಿನೇಕ ಮೋರೆ, ಜಿಲ್ಲಾಧ್ಯಕ್ಷ
ಭಾರತೀಯ ಕಿಸಾನ್ ಸಂಘ, ಧಾರವಾಡ

ನೀಡುವ ಸಬ್ಸಿಡಿ ದರದ ಸೋಯಾ ಬಿತ್ತನೆ ಬೀಜ ಕೆಜಿಗೆ 79 ರೂ. ಇದೆ. ಮಾರುಕಟ್ಟೆಗಿಂತ ಕೆಜಿಗೆ 6 ರೂ. ಹೆಚ್ಚಾದರೆ, ಸರ್ಕಾರ ನಮಗೇನು ಸಬ್ಸಿಡಿ ನೀಡದಂತಾಗುತ್ತದೆ ಎಂಬುದು ಅನೇಕ ರೈತರ ಪ್ರಶ್ನೆ.

ಬೀದರ ಜಿಲ್ಲೆಯಲ್ಲಿಈ ಬಾರಿ ಶೇ.65 ರೈತರು ಸೋಯಾಬೀನ್ ಬಿತ್ತನೆಗೆ ಮುಂದಾಗಿರುವುದು ಸೋಯಾ ಬೀಜದ ಆಭಾವ ಸೃಷ್ಟಿಯಾಗಿದೆ. ಕೆಳದ ವರ್ಷ ಸೋಯಾ ಬಿತ್ತನೆ ಬೀಜದ 30 ಕೆಜಿ ಚೀಲ 1,660-1,670 ರೂ. ದರ ಇತ್ತು. ಈ ಬಾರಿ ಸಬ್ಸಿಡಿ ಸೇರಿ ಅದು 2,370 ರೂ. ಆಗಿದೆ. ಜಿಲ್ಲೆಯ ಕಮಲಾಪುರ ತಾಲೂಕಿನ ಕೆಲ ಗ್ರಾಮಗಳಿಗೆ ಇಂದಿಗೂ ಸಬ್ಸಿಡಿ ದರದ ಸೋಯಾ ಬಿತ್ತನೆ ಬೀಜವೇ ತಲುಪಿಲ್ಲವೆಂಬುದು ರೈತರ ಆರೋಪ.

**1.50 ಲಕ್ಷ ರೂ.ಗೆ ಒಂದು ಕೆಜಿ:** ಬಳ್ಳಾರಿ ರಾಯಚೂರು ಜಿಲ್ಲೆಯಲ್ಲಿ ಭತ್ತದ ಬದಲು ಮೆಣಸಿನಕಾಯಿ ಪ್ರಾಮುಖ್ಯತೆ ಪಡೆಯುತ್ತಿದೆ. ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಮೆಣಸಿನಕಾಯಿ ಪ್ರಮುಖ ಬೆಳೆ. ಯಾದಗಿರಿ ಜಿಲ್ಲೆಯಲ್ಲೂ ಮೆಣಸಿನಕಾಯಿ ಬೆಳೆಪ್ರದೇಶವಿಸ್ತರಣೆಯಾಗತೊಡಗಿದೆ. ಕೆಲ ಜಿಲ್ಲೆಗಳಲ್ಲಿರೈತರು ಒಂದೇ ಕಂಪನಿಯ ಬಿತ್ತನೆ ಬೀಜಕ್ಕೆ ಮುಗಿಬಿದ್ದಿರುವುದು ಮೆಣಸಿನಕಾಯಿ ಬೀಜದ ದರ ಹೆಚ್ಚಲು ಜತೆಗೆ ಕಾಳಸಂತೆ ಮಾರಾಟಕ್ಕೂ ಅವಕಾಶ ಮಾಡಿಕೊಟ್ಟಿದೆ.

ಸಿಹೆಂಟಾ ಕಂಪನಿಯ ಮೆಣಸಿನಕಾಯಿ ಬೀಜಕ್ಕೆ ರೈತರು ಮುಗಿಬಿದ್ದಿದ್ದು, ವಿಶೇಷವಾಗಿ ರಾಯಚೂರು, ಬಳ್ಳಾರಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೆಚ್ಚಿನ ದರಕ್ಕೆ ಇದು ಮಾರಾಟವಾಗತೊಡಗಿದೆ.

ಕಾಳಸಂತೆಯಲ್ಲಿ ಏರಿಳಿಸುವ ರೈತರಿಗೆ ಹೆಚ್ಚಿನ ದರ ಪಡೆದರೂ ಕಂಪನಿ ನಿಗದಿಪಡಿದ ದರದಲ್ಲೇ ಬಿಲ್ ನೀಡಲಾಗುತ್ತಿದೆ.

UASB LIBRARY
Newspaper Clippings
Pg .2 Wednesday 16-06-2021 Jai Kisan




# No proposal to waive agrarian loans: Minister

INTERVIEW

BENGALURU, DHNS

Much will be riding on the agriculture sector again this year as the lockdown pushed people back to villages. Agriculture Minister B C Patil talks to *Akram Mohammed* of *DH* on measures to optimise yield and offer fair prices to farmers in the market. Excerpts:

**What is the outlook this year for the agriculture sector that recorded growth last year?**
This year, too, good rainfall is forecast for the state, which is expected to be better than the rainfall previous year. By the end of May, the state received an average of 155 mm rainfall. This year, pre-monsoon showers were good and we received 254 mm rainfall, which is 64% above normal. This is a good sign as it has helped sowing.

**Farmers often complain about the non-availability of fertilisers, seeds and other products.**
We have sufficient stock this year. For the sowing season, overall demand of Karnataka is 6.3 lakh quintal seeds, against which we have a stock of 7.74 lakh quintal. Similarly, we have adequate stock of key fertilizers as sowing will pick up during the month.

**Dependency on agriculture has risen as jobs in urban areas have reduced due to the lockdown. Any special focus on agriculture?**
The government has been focusing on the sector. We've been offering subsidies to farmers under various schemes, providing mechanised tools such as tractors etc. Cash incentive of Rs 6,000 is transferred under PM Kisan Samman Yojana, and Rs 4,000 under CM Kisan Samman Yojana.

**Despite good yield, the primary concern of farmers remains the market. Last year, despite good yields farmers suffered because of the lockdown. There are similar concerns this year.**
All the food grains produced were sold last year. Even this year, the government is doing all it can to help the agrarian community. All industries were closed, save for farmers activities. Even transportation of farm goods were allowed. In rural areas, even before lockdown was relaxed fertilizers, seeds and related stores were allowed to remain open till 12 noon when other shops shut by 10.


B C Patil

**The Israeli model of agriculture proposed by the H D Kumaraswamy-led coalition government has been scrapped due to lack of funds. Will the BJP government pursue it, especially for farmers in arid regions?**
To help such farmers, we're offering up to 90% subsidy for micro-irrigation projects. Last year, the Finance department had discontinued state's 40% subsidy for such projects. This was taken up at a recent meeting with the CM where we highlighted that subsidy has gone down from 90% to 50%. The CM directed the Finance department not to stop funds for farmer-related projects.

**There are complaints that only a handful of farmers benefit from the PM Fasal Bima Yojana and that insurance claims are not honoured.**
All insurance claims till 2019-20 are cleared. The insurance amount is based on the past crop-cutting experience. The companies determine a threshold income based on average crop yield of a land over the past seven years. In some places yield will be good and it'll be bad in other places. But, farmers don't understand the criteria used to disburse insurance and feel that they are being cheated.

**Is there a proposal to waive crop loans as farmers are in distress?**
We're providing interest-free loans through the cooperation department to help farmers. There's no proposal for a loan waiver.

**Farmers groups have raised complaints of skyrocketing fertilizer prices.**
Cost of key raw materials used to manufacture fertilizers has increased, after which the government has increased subsidy. Earlier, subsidy amount was Rs 500 for one bag of fertilizer. It is now Rs 1,200 subsidy per bag. We are offering fertilizers at old rates to farmers.

16-06-2021 Dec Hrd Pg 04